**ಸಾಕ್ಷಿಯನ್ನು ದಿನಾಂಕಃ 19.11.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ದಾವಾ ಆಸ್ತಿಯ ಸ.ನಂ. 10/49 ರಲ್ಲಿ ಒಟ್ಟು 03 ಎಕರೆ ಆಸ್ತಿ ಇದ್ದು, ದಾವೆಯನ್ನು 02 ಎಕರೆಗೆ ಮಾಡಲಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಬದುಕಿದ್ದಾಗ ರಾಜೇಶ ಎಂಬುವವರಿಗೆ ಇದೇ ಸ.ನಂ. ಜಮೀನಿನಲ್ಲಿ 01 ಎಕರೆ ಮಾರಾಟ ಮಾಡಿರುತ್ತಾರೆಂದರೆ ಸರಿ. ದಾವಾ ಸ.ನಂ.ಆಸ್ತಿಯು ನನ್ನ ತಂದೆಗೆ ಸರ್ಕಾರದಿಂದ ಮಂಜೂರಾದ ಆಸ್ತಿ ಎಂದರೆ ಸರಿ. ವಾದಿಯು ನನ್ನ ತಾಯಿಯ ತಂಗಿಯ ಗಂಡ. ನನ್ನ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಯು ನನ್ನ ಮತ್ತು 1 ರಿಂದ 4 ನೇ ಪ್ರತಿವಾದಿ ಮತ್ತು 6 ನೇ ಪ್ರತಿವಾದಿಯರ ಹೆಸರಿಗೆ ಜಂಟೀ ಖಾತೆ ಆಗಿರುತ್ತದೆಂದರೆ ಸಾಕ್ಷಿಯು ನನ್ನ ಚಿಕ್ಕಪ್ಪ ವಾದಿ ದಾಸಾಚಾರಿಯೇ ನಿಂತು ಖಾತೆ ಮಾಡಿಸಿಕೊಟ್ಟಿರುತ್ತಾರೆಂದರೆ ಸರಿ. ಅಣ್ಣೂರು ಗ್ರಾಮದಲ್ಲಿ ನಾವು ಮೊದಲಿನಿಂದಲೂ ವಾಸವಿರುತ್ತೇವೆಂದರೆ ಸರಿ. ವಾದಿಯು ಹುಣಸೂರು ತಾಲ್ಲೋಕಿನ ಶ್ರವಣಹಳ್ಳಿ ಗ್ರಾಮದಲ್ಲಿ ಇರುತ್ತಾರೆಂದರೆ ಸರಿ. ವಾದಿಯು ತಮ್ಮ ಜೊತೆ ಇದ್ದರು ಎಂದು ತೋರಿಸಲು ದಾಖಲೆ ಹಾಜರುಮಾಡಿದ್ದೀರಾ ಎಂದರೆ ಇಲ್ಲಾ ಎನ್ನುತ್ತಾರೆ. ದಾವಾ ಆಸ್ತಿಯನ್ನು ಅಡಮಾನ ಮಾಡಿ ನನ್ನ ತಾಯಿ ಅಣ್ಣೂರು ಕಾವೇರಿ ಗ್ರಾಮೀಣ ಬ್ಯಾಂಕ್ ನಲ್ಲಿ ಸಾಲ ಪಡೆದಿದ್ದರು ಎಂದರೆ ಸರಿ. ಸಾಲ ತೀರಿಸುವ ಉದ್ದೇಶಕ್ಕಾಗಿ ದಿನಾಂಕಃ 01.06.2007 ರಂದು ನಾನು, 1 ರಿಂದ 4 ಮತ್ತು 6 ನೇ ಪ್ರತಿವಾದಿಯರು ಸೇರಿ ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆಂದರೆ ಸರಿಯಲ್ಲ. ಕ್ರಯ ಪತ್ರವನ್ನು ನಾನು ಮತ್ತು ವಾದಿಯರು ಹಾಜರುಮಾಡಿರುತ್ತೇವೆ ಎಂದರೆ ಸಾಕ್ಷಿಯು ಭೋಗ್ಯ ಪತ್ರ ಮಾಡಿಕೊಳ್ಳೋಣ

ಎಂದು ಹೇಳಿ ಕ್ರಯ ಪತ್ರ ಮಾಡಿಕೊಂಡಿರುತ್ತಾರೆಂದು ಹೇಳುತ್ತಾರೆ. ನಿ.ಪಿ.-7 ಮತ್ತು ನಿ.ಡಿ.-9 ಕ್ರಯ ಪತ್ರಕ್ಕೆ ನಾನು, ಪ್ರತಿವಾದಿ 1 ರಿಂದ 4 ಮತ್ತು 6 ನೇ ಪ್ರತಿವಾದಿ ಸಹಿ ಮಾಡಿರುತ್ತೇವೆಂದರೆ ಸರಿ. ಸಾಕ್ಷಿಯು ಮುಂದುವರಿದು ಭೋಗ್ಯ ಪತ್ರ ಮಾಡಿಕೊಳ್ಳೋಣ ಎಂದು ಹೇಳಿ ವಾದಿಯು ಕ್ರಯ ಪತ್ರವನ್ನು ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಕ್ರಯ ಪತ್ರ ಆದ ನಂತರ ವಾದಿಯ ಹೆಸರಿಗೆ ದಾವಾ ಆಸ್ತಿಯು ಖಾತೆ ಬದಲಾವಣೆ ಆಗಿರುತ್ತದೆಂದರೆ ಸರಿ. ಕ್ರಯ ಪತ್ರ ಆದ ದಿನವೇ ದಾವಾ ಆಸ್ತಿಯನ್ನು ವಾದಿಯ ಸ್ವಾಧೀನಕ್ಕೆ ಬಿಟ್ಟು ಕೊಟ್ಟಿರುತ್ತೇವೆಂದರೆ ಸಾಕ್ಷಿಯು ನಾವೇ ಸ್ವಾಧೀನ ಇರುತ್ತೇವೆಂದು ನುಡಿಯುತ್ತಾರೆ. ಕ್ರಯ ಪತ್ರ ಆದ ನಂತರ ದಾವಾ ಆಸ್ತಿಯಲ್ಲಿ ತಾವುಗಳೇ ಸ್ವಾಧೀನ ಇರುತ್ತೇವೆಂದು ಹೇಳುತ್ತಿದ್ದು, ಸ್ವಾಧೀನ ಇರುವ ಬಗ್ಗೆ ದಾಖಲೆ ಹಾಜರುಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲಾ ಎನ್ನುತ್ತಾರೆ. ವಾದಿಯು ಭೋಗ್ಯ ಪತ್ರ ಮಾಡಿಸಿಕೊಳ್ಳುವ ಬದಲು ಕ್ರಯ ಪತ್ರ ಮಾಡಿಸಿಕೊಂಡು ಖಾತೆ ಬದಲಾವಣೆ ಮಾಡಿಕೊಂಡಿರುತ್ತಾರೆಂದು ತಾವೇನಾದರೂ ಸಂಬಂಧಪಟ್ಟ ನ್ಯಾಯಾಲಯದಲ್ಲಾಗಲೀ ಅಥವಾ ಕಂದಾಯ ಪ್ರಾಧಿಕಾರದ ಮುಂದಾಗಲೀ ಅರ್ಜಿ ಅಥವಾ ದಾವೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ದಾವೆ ಮಾಡಿರುತ್ತೇವೆಂದು ನುಡಿಯುತ್ತಾರೆ. ನಾವು ಸಲ್ಲಿಸಿದ್ದ ಅಸಲು ದಾವಾ ನಂ. 263/2013 ವಜಾ ಆಗಿರುತ್ತದೆಂದರೆ ಸರಿ. ಸದರಿ ದಾವೆಯ ಆದೇಶವನ್ನು ಪ್ರಶ್ನಿಸಿ ಇದೇ ಹೆಚ್.ಡಿ. ಕೋಟೆ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆರ್.ಎ. ನಂ. 14/2020 ಎಂದು ಮೇಲ್ಮನವಿ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಮೇಲ್ಮನವಿಯು ಸಹ ವಜಾ ಆಗಿರುತ್ತದೆಂದರೆ ಸರಿ. ನಾವು ಸಲ್ಲಿಸಿದ್ದ ದಾವೆ ಮತ್ತು ಮೇಲ್ಮನವಿ ವಜಾ ಆದ ನಂತರ ದಿನಾಂಕಃ

08.06.2020 ರಂದು ವಾದಿಯು ಸ್ವಾಧೀನ ಇರುವ ದಾವಾ ಆಸ್ತಿಗೆ ಅತಿಕ್ರಮ ಪ್ರವೇಶ ಮಾಡಿ ಅವರು ಶೇಖರಿಸಿಟ್ಟಿದ್ದ ಮರದ ತುಂಡುಗಳನ್ನು ತೆಗೆದುಕೊಂಡು ಹೋಗಿ ವ್ಯವಸಾಯ ಚಟುವಟಿಕೆ ತೊಂದರೆ ಕೊಟ್ಟಿರುತ್ತೇವೆಂದರೆ ಸರಿಯಲ್ಲ. ನಾವು ತೊಂದರೆ ಕೊಟ್ಟಿದ್ದರಿಂದ ವಾದಿಯು ಈ ದಾವೆ ಸಲ್ಲಿಸಿರುತ್ತಾರೆಂದರೆ ಸರಿಯಲ್ಲ. ನಾನು, ನನ್ನ ತಾಯಿ, ಸಹೋದರ ಮತ್ತು ಸಹೋದರಿ ಸೇರಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರೂ ಮಾರಾಟ ಮಾಡಿಲ್ಲ ಎಂದು ವಾದಿಯು ಸ್ವಾಧೀನ ಇರುವ ದಾವಾ ಆಸ್ತಿಗೆ ತೊಂದರೆ ಕೊಟ್ಟಿರುತ್ತೇವೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**